# ಬೇಲಿ ಹಾಕಲಾಗಿದೆ

## ಆಕೆ ಮತ್ತಾಕೆಯ ಗರ್ಭದ ನಡುವೆ




**1973ರಲ್ಲಿ ಅಮೆರಿಕದ ಸುಪ್ರೀಂ ಕೋರ್ಟ್, ರೋ ಮತ್ತು ವೇಡ್ ನಡುವಣ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಈಗ ಅಸಿಂಧುಗೊಳಿಸಲಾಗಿದೆ. ಆ ತೀರ್ಪು ಅಮೆರಿಕದ ಮಹಿಳೆಯರಿಗೆ, ನಿರ್ದಿಷ್ಟ ಅವಧಿಯೊಳಗೆ (24 ವಾರ) ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕನ್ನು ಕಲ್ಪಿಸಿತ್ತು. ಆದರೆ ಈಗ ಸುಪ್ರೀಂ ಕೋರ್ಟ್, ಹೊಸ ತೀರ್ಪಿನ ಮೂಲಕ 1973ರ ತೀರ್ಪಿನ ಸಿಂಧುತ್ವಕ್ಕೆ ಅಂತ್ಯ ಹೇಳಿದೆ. ಅಮೆರಿಕದ ರಾಜ್ಯಗಳು ಪ್ರತ್ಯೇಕ ಕಾನೂನು ಜಾರಿ ಮಾಡುವ ಮೂಲಕ, ನಿರ್ದಿಷ್ಟ ಅವಧಿಯವರೆಗಿನ ಗರ್ಭಪಾತವನ್ನು ನಿಷೇಧಿಸಬಹುದು ಎಂದು ಹೇಳಿದೆ. ಹೆಣ್ಣಿಗೆ ತನ್ನ ಗರ್ಭದ ಮೇಲಿರುವ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ ಇದು ಎಂಬ ಪ್ರತಿರೋಧದ ಕೂಗು ಈಗ ಅಮೆರಿಕದಲ್ಲಿಯಷ್ಟೇ ಅಲ್ಲ, ಜಗತ್ತಿನ ಬೇರೆ ಬೇರೆ ದೇಶಗಳಲ್ಲಿಯೂ ಎದ್ದಿದೆ. ಪ್ರಭುತ್ವಕ್ಕೆ, ನ್ಯಾಯವ್ಯವಸ್ಥೆಗೆ ಧರ್ಮ, ಮೌಢ್ಯದ ಅಮಲು ಅಮರಿಕೊಂಡರೆ ಸಮಾಜದ ಚಲನೆಯೇ ಹಿಮ್ಮುಖವಾಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಈ ತೀರ್ಪನ್ನು ನೋಡಬಹುದು.**

**■ ಕಾವ್ಯಾ ಕಡಮೆ**





ಮನಸ್ಸು ಮೂಕವಾಗಿದೆ.

ನಲವತ್ತೊಂಬತ್ತು ವರ್ಷಗಳ ಹಿಂದೆ ಮಹಿಳೆಯ ಗರ್ಭದ ಮೇಲಿನ ಹಕ್ಕನ್ನು ಆಕೆಗೇ ಬಿಟ್ಟುಕೊಟ್ಟಿದ್ದ ಮಹತ್ವದ ತೀರ್ಪೊಂದನ್ನು ಅಮೆರಿಕದ ಸರ್ವೋಚ್ಚ ನ್ಯಾಯಾಲಯ ಅಸಿಂಧುಗೊಳಿಸಿದೆ.

1973ರಲ್ಲಿ ರೋ ವರ್ಸಸ್ ವೇಡ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟು ತೀರ್ಪು ನೀಡುತ್ತ ಅಮೆರಿಕನ್ ಮಹಿಳೆಯರು ನಿರ್ದಿಷ್ಟ ಅವಧಿಯೊಳಗೆ, ಅಂದರೆ ಭ್ರೂಣಕ್ಕೆ ಇಪ್ಪತ್ತನಾಲ್ಕು ವಾರ ತುಂಬುವ ಒಳಗೆ ಗರ್ಭಪಾತ ಮಾಡಿಸಿಕೊಳ್ಳಬಹುದು ಎಂಬ ಹಕ್ಕನ್ನು ಕಲ್ಪಿಸಿತ್ತು. ಇಪ್ಪತ್ನಾಲ್ಕು ವಾರಗಳ ನಂತರ ತಾಯಿಯ ಗರ್ಭದ ಹೊರಗೂ ಮಗು ಬದುಕಬಹುದಾದ ಸಂಭವನೀಯತೆ ಹೆಚ್ಚಿರುತ್ತದೆ, ಅಲ್ಲಿನ ತನಕ ಆ ಭ್ರೂಣದ ಹಕ್ಕು ತಾಯಿಯದು ಮಾತ್ರ ಎಂಬುದು ಈ ತೀರ್ಪಿನ ಉದ್ದೇಶವಾಗಿತ್ತು. ಅದನ್ನೀಗ ರದ್ದುಗೊಳಿಸಿ ಐವತ್ತೂ ರಾಜ್ಯಗಳ ಸರಕಾರಗಳು ತಮಗೆ ಸರಿ ಕಂಡ ಹಾಗೆ ಗರ್ಭಪಾತದ ವಿಷಯವಾಗಿ ಪ್ರತ್ಯೇಕ ಕಾನೂನನ್ನು ರಚಿಸಿಕೊಳ್ಳಬಹುದು ಎಂಬ ಹೊಸ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ಪ್ರಕಟಿಸಿದೆ. ಈ ತೀರ್ಪು ಹೊರಬಂದ ಗಂಟೆಗಳ ಅಂತರದಲ್ಲಿ ಅಮೆರಿಕದ ಹತ್ತಾರು ರಾಜ್ಯಗಳು ಈ ಮೊದಲು ರೂಢಿಯಲ್ಲಿದ್ದ ನಿರ್ದಿಷ್ಟ ಅವಧಿಯನ್ನು ಮೊಟಕುಗೊಳಿಸಿ ತಮ್ಮದೇ ಹೊಸ ಅವಧಿಯನ್ನು ಮಂಡಿಸಿವೆ. ಇನ್ನೂ ಹಲವು ರಾಜ್ಯ ಸರ್ಕಾರಗಳು ಆ ಸರತಿಯಲ್ಲಿ ನಿಂತಿವೆ.

ರಿಪಬ್ಲಿಕನ್ ಪಾರ್ಟಿಯ ಸರ್ಕಾರಗಳು ಅಧಿಕಾರದಲ್ಲಿರುವ ಈ ರಾಜ್ಯಗಳಲ್ಲಿ ಕೆಲವು ಕಡೆ ಆರೇ ವಾರದ ಭ್ರೂಣವನ್ನೂ ತಾಯಿ ಗರ್ಭಪಾತ ಮಾಡಿಸುವಂತಿಲ್ಲ. ಆಕೆ